ಶ್ರೀ ಎಚ್. ಸಿ. ಶ್ರೀಕಂಠಯ್ಯ —ತಲಕಳಲೆ ಡ್ಯಾಂನಲ್ಲಿ ನೀರೂ ಸ್ವಲ್ಪ ಸೋರಿ ಹೋಗುತ್ತಿತ್ತು. ಇದ ಕ್ಕೋಸ್ಕರ ಒಂದು ಕಮಿಟಿಯಂನ್ನು ಮಾಡಿ, ನೀರು ಸೋರಿ ಹೋಗದ ಹಾಗೆ ಏನು ಏರ್ಪಾಡು ಬೇಕೋ ಅದನ್ನು ಮಾಡಿದ್ದೇವೆ. ಮಾನ್ಯ ಸದಸ್ಯರೂ ಹೇಳಿದೆ ಹಾಗೆ ಬ್ಲಾಕ್ ವಾಟರ್ ಅನ್ನು ಉಪಯೋಗಿಸಿಕೊಂಡು ಪಂಪುಸೆಟ್ಟುಗಳನ್ನು ಹಾಕಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇಂಥ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರುಶೇಖರ್.—ಕಳೆದ ವರ್ಷದ ಹಾಗೂ, ಇಂದಿನ ವರ್ಷದ ಮಳೆಯ ಪರಿಸ್ಥಿತಿಯನ್ನು ನೋಡಿಕೊಂಡು ವಿದ್ಯುಚ್ಛಕ್ತಿಯ ಅಭಾವವಿಲ್ಲವೆಂದು ಜನ ಮಾತನಾಡು ತ್ತಿದ್ದಾರೆ. ವಿದ್ಯುಚ್ಛಕ್ತಿಯ ಅಭಾವ ಬರೀ ಕೃತಕ ಅಭಾವವೆಂದು ಮಾತನಾಡುತ್ತಿದ್ದಾರೆ. ಇದಕ್ಕೆ ತಮ್ಮ ಉತ್ತರ ಏನು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ —ತಮಗೆ ಗೊತ್ತಿರುವ ಹಾಗೆ, ನಮಗೆ ಎನರ್ಜಿ ಬೇಕಾಗಿರುವುದು ೪೦೮೦ ಮಿಲಿಯನ್ ವಾಟ್ಸ್. ಆದರೆ ಉತ್ಪಾದನೆಯಾದದ್ದು ೩೫೪೪ ಮಿಲಿಯನ್ ವ್ಯಾಟ್ಸ್ ಇದರಿಂದ ನಮಗೆ ೧೨೭೧ ಮಿಲಿಯನ್ ವ್ಯಾಟ್ಸ್ ಕೊರತೆ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್. ನಮ್ಮ ರಾಜ್ಯದಲ್ಲಿ ಸರಿಯಾದ ರೀತಿಯಲ್ಲಿ ಕೈಗಾರಿಕೆಗಳನ್ನು ನಡಿಸಿ ಕೊಂಡು ಹೋಗಲಿಕ್ಕೆ ಹೈಡ್ರೋ ಎಲೆಕ್ಟ್ರಿಕ್ ಸ್ಕೀಂಗಳಿಗೆ ಬದಲಾಗಿ ಥರ್ಮಲ್ ಯೂನಿಟ್ ಹಾಗೂ ಆಟೊಮಿಕ್ ಪವರ್ ಪ್ಲಾಂಟ್‌ಗಳನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ —ಈಗಾಗಲೆ ವಿದ್ಯುಚ್ಛಕ್ತಿ ಮಂಡಲಿಯವರು ಹಾಗೂ ಸರ್ಕಾರ ದವರನೆ ಇವರ ಬಗ್ಗೆ ಒಂದು ಯೋಚನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈ ಒಂದು ಪ್ಲಾಂಟನ್ನು ಮಂಗಳೂರಿನಲ್ಲಿ ಮಾಡಬೇಕೆಂದಿದ್ದೇವೆ. ಈಗಾಗಲೇ ಸ್ಥಳವನ್ನು ನಾವು ಪರಿಶೀಲಿಸಿ ಕೇಂದ್ರ ಸರ್ಕಾರದ ಗಮನಕ್ಕೆ ಇದನ್ನು ತಂದಿದ್ದೇವೆ. ಆದಷ್ಟುಬೇಗ ಥರ್ಮಲ್ ಯೂನಿಟ್ ಅನ್ನು ಹಾಕುವುದಕ್ಕೆ ಸರ್ಕಾರಡವರಂ ಪ್ರಯತ್ನ ಮಾಡುತ್ತೇವೆ.

Utilisation of Excess Rain Water before Flowing into the T B. River

769. SRI B. SATHYANARAYANA SINGH (Hospet).—

Will the Minister of State for Major and Medium Irrigation be pleased to State :—

(*a*) whether it is a fact that gauging of water in Tungabhadra Project during rainy season is not done ;

(*b*) whether it is a fact that all the excess water some times over flowing and at times let out at Tungabhadra Project which flows into Tungabhadra River runs to the advantage of Andhra Pradesh ;

(*c*) whether the Government intend to take any steps to utilise excess rain water available to the advantage of the State ;

(*d*) whether Government would build new tanks wherever necessary both under Low Level Canal and High Level Canal of Tungabhadra Project and get them filled up during rainy season when excess water is available ;

(*e*) whether Government has any proposal to fill up all old tanks both under Low Level Canal and High Level Canal of Tungabhadra Project during rainy season when excess water is available ?

SRI SUBASH ASTURE (Minister of State for Major & Medium Irrigation).—

(*a*) The Tungabhadra river and the canals are gauged daily throughout the year.

(*b*) The releases from the Tungabhadra Reservior are done according to an agreed working table and are for meeting the needs of both States of Andhra Pradesh and Karnataka.

(*c*) The waters of Tungabhadra are being already used to the maximum possible extent and investigation of project's up-stream of Tungabhadra Dam are also under consideration.

(*d*) There are no such proposals at present.

(*e*) The following tanks are being supplied with water from the Tungabhadra Canals :

Right Bank High Level Canal	*Right Bank Low Level Canal*
Allikere Tank	Kamalapuram Tank
Daroji Tank	Gowramma Tank
	Vittalapur Tank

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ನನ್ನ ಪ್ರಶ್ನೆಯ (ಸಿ) ಗೆ ಉತ್ತರವಾಗಿ 'ತುಂಗಭದ್ರಾ ಅಣೆಕಟ್ಟಿನ ಮೇಲ್ಭಾಗದ ಹೊಳೆ ಯೋಜನೆಗಳ ಬಗ್ಗೆ ತನಿಖೆಯು ಪರಿಶೀಲನೆಯಲ್ಲಿದೆ' ಎಂದು ಹೇಳಿದ್ದೀರಿ. ಮಳೆಗಾಲದಲ್ಲಿ ಹೆಚ್ಚು ನೀರು ಏನು ಲಭ್ಯವಾಗುತ್ತದೆ ಅದನ್ನು ಯಾವ ರೀತಿ ಉಪಯೋಗ ಮಾಡುತ್ತೀರಿ ಎನ್ನುವುದನ್ನು ವಿವರವಾಗಿ ತಿಳಿಸುತ್ತೀರಾ ?

† ಶ್ರೀ ಸುಭಾಸ್ ಅಸ್ತೂರೆ.—ಮಳೆಗಾಲದಲ್ಲಿ ಬಂದ ಹೆಚ್ಚು ನೀರನ್ನು ತುಂಗಭದ್ರಾ ಜಲಾಶಯದಲ್ಲಿ ಎಷ್ಟು ನೀರನ್ನು ಹಿಡಿದು ಇಟ್ಟುಕೊಳ್ಳಬೇಕೋ ಅಷ್ಟನ್ನು ಹಿಡಿದಿಟ್ಟುಕೊಂಡು ಬಾಕಿಯದನ್ನು ಹೊರಗೆ ಬಿಡಲೇ ಬೇಕಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಮಳೆಗಾಲದಲ್ಲಿ ಆ ನೀರನ್ನು ಹೊರಗೆ ಬಿಡುವುದರಿಂದ ಅದರ ಪೂರ್ತಿ ಉಪಯೋಗ ಆಂಧ್ರದವರಿಗೆ ಅನುಕೂಲವಾಗುತ್ತದೆ. ಅಲ್ಲದೆ (ಈ) ಗೆ ಉತ್ತರವಾಗಿ ಸಧ್ಯದಲ್ಲಿ ಅಂಥ ಸಲಹೆಗಳಾವುವು ಇಲ್ಲ ಎಂದು ಹೇಳಿದ್ದೀರಿ. ಆದುದರಿಂದ ನಾನು ಕೇಳುವುದು ಏನೆಂದರೆ ಹೊಸದಾಗಿ ಕೆರೆಗಳನ್ನು ಕಟ್ಟಿ ಆ ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ದಾರೂ ತಾವು ಪರಿಶೀಲಿಸುತ್ತೀರಾ ?

ಶ್ರೀ ಸುಭಾಷ್ ಅಸ್ತೂರೆ.—ಕೆಲವು ಪ್ರಾಜೆಕ್ಟ್‌ಗಳು ಇನ್‌ವೆಸ್ಟಿಗೇಷನ್‌ನಲ್ಲಿದೆ. ಸಾಧ್ಯವಾದಷ್ಟು ಗರಿಷ್ಟ ಪ್ರಮಾಣದ ತುಂಗಭದ್ರಾ ನೀರನ್ನು ಈಗಾಗಲೇ ಬಳಸಿಕೊಳ್ಳಲಾಗುತ್ತಿದೆ. ಇನ್ನು ಅದಕ್ಕಿಂತಲೂ ಹೆಚ್ಚಿಗೆ ಬಂದಂಥ ನೀರನ್ನು ಸ್ಟೋರ್ ಮಾಡುವುದಕ್ಕೆ ಸಾಧ್ಯವಿಲ್ಲ ಆದುದರಿಂದ ಮಳೆಗಾಲದಲ್ಲಿ ಹೆಚ್ಚು ಬಂದ ನೀರನ್ನು ಹೊರಗೆ ಬಿಡಲೇಬೇಕಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—(ಆ) ಗೆ ಉತ್ತರವಾಗಿ ತುಂಗಭದ್ರಾನದಿ ಹಾಗೂ ಕಾಲುವೆ ನೀರನ್ನು ವರ್ಷ ಪೂರ್ತಿಯಾಗಿ ಪ್ರತಿನಿತ್ಯವೂ ಅಳತೆ ಮಾಡಲಾಗುತ್ತದೆ ಎಂದು ಹೇಳಿದ್ದೀರಿ. ನೀವು ಆಂಧ್ರಕ್ಕೆ ಕೊಡಬೇಕಾದ ನೀರನ್ನು ಕರ್ನಾಟಕ ಭಾಗದಲ್ಲಿ ಗೇಜ್ ಮಾಡಿ ಆ ನೀರನ್ನು ಕೊಡುವುದಾದರೆ ಉಳಿದ ನೀರೂ ಸೋರಿಹೋಗುತ್ತದೆ ಎಂದು. ಇದರಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಈ ಬೋರ್ಡ್‌ನವರು ಯಾವ ರೀತಿ ಈವೊತ್ತು ಆ ನೀರನ್ನು ಗೇಜ್ ಮಾಡಿ ಆಂಧ್ರಕ್ಕೆ ಕೊಡುತ್ತಾರೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಸುಭಾಷ್ ಅಸ್ಕೂರೆ.—ಇದಕ್ಕಾಗಿ ಒಂದು ಬೋರ್ಡ್ ಇದೆ. ಅವರು ತೀರ್ಮಾನ ಮಾಡುತ್ತಾರೆ. ಎಷ್ಟು ನೀರು ಅವರಿಗೆ ಕೊಡಬೇಕು ಎನ್ನುವುದನ್ನು ಅವರು ನಿರ್ಣಯ ತೆಗೆದುಕೊಳ್ಳುತ್ತಾರೆ. ಇದನ್ನು ವಿಚಾರ ಮಾಡದೇ ಹೋದರೆ ಈ ಬೋರ್ಡ್ ಏತಕ್ಕೆ ಇರಬೇಕು, ಇರಬೇಕಾಗಿಯೇ ಇಲ್ಲ. ಆದುದರಿಂದ ಈ ಬೋರ್ಡ್‌ನವರು ಯಾವ ರೀತಿಯಾಗಿ ಒಂದು ನಿರ್ಣಯ ತೆಗೆದುಕೊಳ್ಳುತ್ತಾರೋ ಆ ರೀತಿಯಾಗಿ ಆದರೂ ಕೂಡ ಒಂದು ನಿರ್ಣಯ ತೆಗೆದುಕೊಳ್ಳಬೇಕು.

ಶ್ರೀ ಕೆ. ಎಫ್. ಪಾಟೀಲ್.—ಶಿವಮೊಗ್ಗ, ಹೊನ್ನಾಳಿ, ಹಿರೇಕೆರೂರು ಈ ಭಾಗಗಳಲ್ಲಿ ತುಂಗಭದ್ರಾ ಅಣೆಕಟ್ಟಿನ ಮೇಲ್ಭಾಗದ ಹೊಳೆ ಯೋಜನೆಗಳ ಬಗ್ಗೆ ಏನಾದರೂ ಯೋಜನೆಗಳು ಇವೆಯೇ ? ಇದ್ದರೆ ಯಾವುದು ಇದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಸುಭಾಸ್ ಅಸ್ಕೂರೆ.—ಅದರಲ್ಲಿ ನೀರು ಎಷ್ಟು ಹರಿದು ಹೋಗುತ್ತದೆ ಅನ್ನುವುದನ್ನು ನೋಡಿಕೊಂಡು ಅಣೆಕಟ್ಟನ್ನು ಕಟ್ಟಬೇಕಾಗುತ್ತದೆ. ಆದರೆ ಮಳೆಗಾಲದಲ್ಲಿ ಅದರಲ್ಲಿ ಹೆಚ್ಚು ನೀರು ಹರಿದು ಹೋಗುತ್ತದೆ ಅಂತ ಹೇಳಿ ನಾವು ಅಲ್ಲಿ ಡ್ಯಾಮ್ ಕಟ್ಟಬೇಕು ಅಂದರೆ ಆಗುವುದಿಲ್ಲ. ಕೆಲವು ನೀರನ್ನು ನಾವು ಆಂಧ್ರಕ್ಕೆ ಬಿಡಲೇಬೇಕಾಗುತ್ತದೆ. ತುಂಗಭದ್ರಾ ಸಬ್ ಬೇಸಿನ್‌ನಲ್ಲಿ ಎಷ್ಟು ನೀರು ಬರುತ್ತದೆ ಅದನ್ನು ನೋಡಿಕೊಂಡು ಮಂತ್ರಾಲಯ ವಾಟರ್ ಡಿಸ್ಪ್ಯೂಟ್ ಬೇರೆ ಇದೆ ; ಅವರಲ್ಲಿ ನಮಗೆ ಏನು ಬರುತ್ತದೆ ಅದನ್ನೂ ನೋಡಿಕೊಂಡು ನಾವು ಯೋಜನೆಗಳು ಮಾಡಬೇಕಾಗುತ್ತದೆ ಬರೀ ಮಳೆಗಾಲದಲ್ಲಿ ಹೆಚ್ಚು ನೀರು ಬರುತ್ತದೆ ಅಂತ ನೋಡಿಕೊಂಡು ರಿಸರ್ವಾಯರ್‌ಗಳನ್ನು ಕಟ್ಟಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಯಾವ ಯಾವ ಪ್ರಾಜೆಕ್ಟ್‌ಗಳ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಸುಭಾಸ್ ಅಸ್ಕೂರೆ.—ಅದಕ್ಕೆ ಪ್ರತ್ಯೇಕವಾದ ನೋಟೀಸ್ ಕೊಟ್ಟರೆ ಪ್ರತಿಯೊಂದು ಪ್ರಾಜೆಕ್ಟ್ ಬಗ್ಗೆಯೂ ಹೇಳುತ್ತೇನೆ.

Unauthorised Arrack Shops in Hirekerur Taluk

787. SRI B. G. BANAKAR (Hirekerur).—

Will the Minister for Excise and Labour be pleased to state :—

(*a*) whether it has come to the notice of Government that the Excise contractors of Hirekerur Taluk are running 13 authorised arrack shops in the villages of Hirekerur, Rattihalli, Masura, Chikkerur, Kodu, Nagavanda Hamsa Bhavi, Halluva etc., and nearly 80-85 unauthorised shops in the villages of Medura, Kada, Maggi and Yathinahalli, etc ;

(*b*) why the Government should not take suitable action to stop unauthorised arrack shops running without licence and to take action to start arrack shops only after obtaining licence in every village ;

(*c*) the action Government would take against the persons who are running unauthorised arrack shops in each village in order to escape from payment of fee of Rs. 500 to obtain a licence ;

(*d*) the action Government would take with regard to the sale of arrack in authorised and unauthorised shops in Hirekerur Taluk at Rs. 13-50 per litre higher than the rate fixed by the Government ?